ಮೊತ್ತದ ಮೇಲೆ ಕಮಿಷನ್ ನೀಡಲಾಗಿತ್ತು.

ಈ ವ್ಯವಸ್ಥೆಯಿಂದ ಇವರೊಡನೆ ಜೊತೆಗೂಡಲು ಬಯಸಿದ ಅಂಧ ಮಿತ್ರರಿಗೆ ಕೆಲಸದಲ್ಲಿ ಧುಮುಕುವ ಅವಕಾಶ ಸಿಕ್ಕಿತು. ಈ ವಿಧದಲ್ಲಿ ಭಾವೇಶ್ ಮತ್ತಷ್ಟು ಅಂಧರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮುನ್ನಡೆದರು. ಮೊದಲಿಗೆ ಹೋಲಿಸಿದರೆ ಇಂದು ಲಾಜಿಸ್ಟಿಕ್ಸ್ ಬಹಳಷ್ಟು ಅಗ್ಗವಾಗಿದೆ ಹಾಗೂ ಸುಲಭವೂ ಆಗಿದೆ. ಇಂದು ಜೊತೆಗೂಡಿದ ಅನೇಕ ಅಂಧ ಮಿತ್ರರು, ಮಾರ್ಕೆಟಿಂಗ್‌ನಲ್ಲಿ ಎಂ.ಬಿ.ಎ. ಮಾಡಿದ್ದಾರೆ. ಅವರು ವರ್ಷವಿಡೀ ಇಂತಹ ದೊಡ್ಡ ಅಂಧ ಪರಿವಾರಕ್ಕೆ ಮಾರ್ಕೆಟ್ ಹುಡುಕುವುದರಲ್ಲಿ ವ್ಯಸ್ತರಾಗಿರುತ್ತಾರೆ. ದಿಟವಾದ ಅರ್ಥದಲ್ಲಿ ಈ ಮೋಂಬತ್ತಿಗಳ ಕಾರಣವಾಗಿ ಅಗಣಿತ ಅಂಧಮಿತ್ರರ ಜೀವನದಲ್ಲಿ ಬೆಳಕು ಮೂಡಿದೆ, ಬದುಕು ಬದಲಾಗಿದೆ.

ಇಂದಿಗೂ ನಮ್ಮ ದೇಶದಲ್ಲಿ ಕೋಟಿ ಕೋಟಿ ರೂಪಾಯಿಗಳ ಮೋಂಬತ್ತಿಗಳು ಆಮದಾಗುತ್ತವೆ. ಇದೊಂದು ದೊಡ್ಡ ಮಾರುಕಟ್ಟೆ. ಎಷ್ಟೆಲ್ಲ ಭಾರತೀಯ ವಿದೇಶಿ ವಿನಿಮಯ ಇದರಲ್ಲಿ ವೆಚ್ಚವಾಗುತ್ತದೆ. ಇಂದು ಭಾವೇಶ್ ಸ್ವದೇಶೀ ಪರ್ಯಾಯವನ್ನು ನಮಗೆ ನೀಡಿದ್ದಾರೆ. ಅನೇಕ ಹೊರ ದೇಶಗಳಿಗೆ ಪರಿಸರ ಸ್ನೇಹಿಯಾದ ಇವರ ಮೋಂಬತ್ತಿಗಳು ರಫ್ತಾಗುತ್ತವೆ.

ನೆರೆದೇಶದಿಂದ ಬರುವ ಬಹಳಷ್ಟು ಮೋಂಬತ್ತಿಗಳಲ್ಲಿ ಅಗ್ಗದ ಪ್ರಾಣಿಜನ್ಯ ಫ್ಯಾಟ ವ್ಯಾಕ್ಸ್ ಬಳಸಿರುವುದುಂಟು. ಇಂತಹ ಅಗ್ಗದ ಬೆಲೆಯ ಮೇಣ ಭಾರತದಲ್ಲಿಯೂ ದೊರೆಯುತ್ತದೆ. ನಡುವೆ ಇಡುವ ಬತ್ತಿಯಲ್ಲಿ ಸೀಸ ಬಳಸಿರುವುದುಂಟು. ಸೀಸ ಅಪಾಯಕಾರಿ ಮಾಲಿನ್ಯವನ್ನು ಹೊರಹಾಕುತ್ತದೆ. ಬತ್ತಿಗಳಲ್ಲಿ ಸೀಸ ಬಳಸುವುದು ಕಾನೂನುಬಾಹಿರವಾಗಿದ್ದರೂ ಅದನ್ನು ತಡೆಯುವುದು ಕಷ್ಟವಾಗಿದೆ. ಸನ್‌ರೈಸ್ ಕ್ಯಾಂಡಲ್ಸ್ ಅಗ್ಗವಾಗಿ ದೊರೆಯುವ ಪ್ರಾಣಿಜನ್ಯ ಫ್ಯಾಟ ವ್ಯಾಕ್ಸ್ ಬಳಸುವುದಿಲ್ಲ. ಕಾರಣ ಅವು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. 'ನಾವು ನಮ್ಮ ಮೋಂಬತ್ತಿಗಳಲ್ಲಿ ಅಧಿಕವಾಗಿ ಸಸ್ಯಜನ್ಯವಾದ ಸೋಯಾ ಮೇಣ, ಪಾಮ್ ಮೇಣ (ತಾಳೆಮರದ ಮೇಣ) ಮತ್ತು ಜೇನುಗೂಡಿನ ಮೇಣವನ್ನು ಬಳಸುತ್ತೇವೆ. ಇವು ದುಬಾರಿಯ ಕಚ್ಚಾ ಪದಾರ್ಥವಾದರೂ ನಮ್ಮ ಮೋಂಬತ್ತಿಗಳು ಗ್ರಾಹಕರಿಗೆ ಸುರಕ್ಷಿತವಿರಬೇಕು ಮತ್ತು ಪರಿಸರ ಸ್ನೇಹಿಯಾಗಿರಬೇಕು ಎಂಬುದು ನಮ್ಮ ಉದ್ದೇಶ. 25 ವರ್ಷಗಳಿಂದ ಬಲು ಸ್ಪರ್ಧೆ ಇರುವ ಮೋಂಬತ್ತಿ ಉದ್ಯಮದಲ್ಲಿ ನಾವು ಉಳಿದು ಬಂದಿರುವುದು ನಮ್ಮ ಗುಣಮಟ್ಟದ ಕಾರಣದಿಂದಾಗಿ, ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯ ಕಾರಣದಿಂದಾಗಿ. ಅದನ್ನು ಉಳಿಸಿಕೊಳ್ಳಲು ನಾವು ಸದಾ ಶ್ರಮಿಸುತ್ತೇವೆ' ಎಂದು ಹೇಳುವ ಭಾವೇಶ್, ತಾವು ಬಳಸುವ ಕಚ್ಚಾ ಪದಾರ್ಥಗಳ ಬಗ್ಗೆ ಬಹಳಷ್ಟು ಗಮನ ನೀಡುತ್ತಾರೆ. ಪರಿಸರಕ್ಕೆ ಹಾನಿಯಾಗದ, ಗ್ರಾಹಕರಿಗೆ ಹೊಗೆಯಿಲ್ಲದ, ಆರೋಗ್ಯಕ್ಕೆ ಹಾನಿಯಿಲ್ಲದ ಮೋಂಬತ್ತಿಗಳ ತಯಾರಿಕೆ ಇವರ ಗುರಿಯಾಗಿ, ಸುಮಾರು 5000 ರೈತರೊಡನೆ ಸನ್‌ರೈಸ್ ಜೊತೆಗೂಡಿದೆ. ಈ ಜೇನು ಸಾಕುವ ರೈತರು ಜೇನುತುಪ್ಪವನ್ನು ಖಾದಿ ಗ್ರಾಮೋದ್ಯೋಗಕ್ಕೆ ನೀಡುತ್ತಾರೆ, ಜೇನು ಮೇಣವನ್ನು ಸನ್‌ರೈಸ್‌ಗೆ ಮಾರುತ್ತಾರೆ.

ಕಳೆದ ದೀಪಾವಳಿಯ ದಿನ ನಾನು ಭಾವೇಶ್ ಅವರ ಮೋಂಬತ್ತಿಗಳನ್ನು ತರಿಸಿಕೊಂಡೆ, ನನ್ನ ನೆರೆಹೊರೆಯವರಿಗೆ ಉಡುಗೊರೆಯಾಗಿ ಹಂಚಿದೆ. ನಾವು ಕೊಳ್ಳುವ ಒಂದೊಂದು ಸ್ವದೇಶಿ ವಸ್ತುವಿನಲ್ಲಿ, ಅದರಲ್ಲೂ ಕೈಯಲ್ಲಿ ಮಾಡುವ ಗುಡಿಕೈಗಾರಿಕೆಯ ವಸ್ತುಗಳಲ್ಲಿ ನಮ್ಮ ಭಾರತೀಯರ ಕೈಗಳಿಗೆ ಕೆಲಸ ದೊರೆಯುತ್ತದೆ. ಸ್ವಾಭಿಮಾನದ ಬದುಕಿಗೆ ದಾರಿಯಾಗುತ್ತದೆ.

* * *

ಸತತ ಸುಧಾರಣೆಯ ಹಾದಿಯಲ್ಲಿ ಭಾವೇಶ್ ಯೋಚಿಸುತ್ತಿದ್ದರು. ತಾವು ತಯಾರಿಸುವ ವಸ್ತುಗಳು ಉತ್ತಮವಾಗುತ್ತಾ ಹೋಗಬೇಕು. ಹಾಗೆಯೇ ಕಾರ್ಯವಿಧಾನಗಳು ಸುಧಾರಿಸುತ್ತಾ ಹೋಗಬೇಕು ಎಂದು ಯೋಚಿಸುವರು. ಒಂದು ದಿನ ಅವರು ತಮ್ಮ ಕಾರ್ಖಾನೆಯ ಮೇಣದ ತ್ಯಾಜ್ಯದ ಬಗ್ಗೆ ಯೋಚಿಸಿದರು. ಪ್ರತಿಯೊಂದು ಕಾರ್ಖಾನೆಯಲ್ಲಿಯೂ ವೇಸ್ಟೇಜ್ ಇರುತ್ತದೆ. ಒಂದು ಚಿನ್ನದ ಆಭರಣ ಮಾಡಿದರೂ ವೇಸ್ಟೇಜ್ ಇರುತ್ತದೆ. ಆದರೆ ತಮ್ಮ ಮೋಂಬತ್ತಿಯ ಕಾರ್ಖಾನೆಯಲ್ಲಿ ವೇಸ್ಟೇಜ್ ಇಲ್ಲದಂತೆ ಮಾಡುವುದು ಭಾವೇಶರ ಗುರಿಯಾಯಿತು. ತ್ಯಾಜ್ಯ ಮೇಣವನ್ನು ರೀಸೈಕಲ್ ಮಾಡಿ ಪುನರ್ ಬಳಕೆಯ ಯೋಜನೆ ಅವರದು. ಆರಂಭದಲ್ಲಿ ಇದು ಸುಲಭವಿರಲಿಲ್ಲ. ವಿವಿಧ ಬಣ್ಣಗಳ ಮೇಣದ ತ್ಯಾಜ್ಯ ಗೋದಾಮಿನಲ್ಲಿ ರಾಶಿ ರಾಶಿಯಾಗಿ ಕುಳಿತಿತ್ತು. ಅವನ್ನು ಹಾಗೆಯೇ ಬಳಸಿದಾಗ, ತಯಾರಾದ ಮೋಂಬತ್ತಿಗಳ ಬಣ್ಣ ತೀರಾ ಗಬ್ಬಾಗಿ ಕಾಣುತ್ತಿತ್ತು. ಬಹಳಷ್ಟು ಪ್ರಯೋಗದ ನಂತರ ಅವುಗಳನ್ನು ಕಪ್ಪು ಬಣ್ಣದ ಮೋಂಬತ್ತಿಗಳಾಗಿ ಪರಿವರ್ತಿಸಿದರು. ಕಪ್ಪು ಬಣ್ಣದ ಮೋಂಬತ್ತಿಗಳೂ




ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರಿಂದ 2014ರಲ್ಲಿ ರಾಷ್ಟ್ರಪತಿ ಪುರಸ್ಕಾರ ಪಡೆಯುತ್ತಿರುವ ಭಾವೇಶ್ ಭಾಟಿಯಾ